# ಯುವತಿಯರ ಮೆಚ್ಚು ಪೆನ್ಸಿಲ್ ಕಟ್ ಪ್ಯಾಂಟ್



**ಜೀನ್ಸ್, ಟೀ ಶರ್ಟ್ ಧರಿಸಿದರೆ ಮಾತ್ರ ಸ್ಟೈಲ್ ಎನ್ನುವವರು ಒಮ್ಮೆ ಕುರ್ತಾದತ್ತ ಮುಖ ಮಾಡಿ ನೋಡಿ. ಕುರ್ತಾಕ್ಕೆ ತಕ್ಕದಾದ ಪ್ಯಾಂಟ್ ಆಯ್ಕೆ ಮಾಡಿಕೊಂಡರೆ ಕುರ್ತಾದಲ್ಲಿಯೂ ನೀವು ಸುಂದರವಾಗಿ ಕಾಣಿಸಿಕೊಳ್ಳಬಹುದು!**

■ ಪವಿತ್ರಾ ರಾಘವೇಂದ್ರ ಶೆಟ್ಟಿ

ಸುಂದರವಾಗಿ ಕಾಣಿಸಿಕೊಳ್ಳಬೇಕು ಎಂಬ ಆಸೆ ಯಾರಿಗಿರಲ್ಲ ಹೇಳಿ? ಅದರಲ್ಲೂ ಹುಡುಗಿಯರಿಗೆ ಈ ಅಂದದ ಕುರಿತು ತುಸು ಹೆಚ್ಚೇ ಕಾಳಜಿ ಇರುತ್ತದೆ. ಉಡುಪಿಗೆ ತಕ್ಕ ಮೇಕಪ್, ಅದಕ್ಕೆ ತಕ್ಕ ಆ್ಯಕ್ಸೆಸರೀಸ್ ಹೀಗೆ ಎಲ್ಲದರಲ್ಲೂ ಪರ್ಫೆಕ್ಟ್ ಆಗಿ ಇರಬೇಕು ಎಂಬ ಹಪಹಪಿ ಹೆಂಗಳೆಯರದ್ದು. ಫ್ಯಾಷನ್ ಜತೆಗೆ ಈಗಿನ ಟ್ರೆಂಡ್ ಫಾಲೊ ಮಾಡುವುದು ಕೂಡ ಈಗ ಅಷ್ಟೇ ಮಹತ್ವದಾಗಿದೆ.

ಈಗ ನಾನಾ ಬಗೆಯ ಕುರ್ತಾಗಳು ಮಾರುಕಟ್ಟೆಯಲ್ಲಿದೆ. ಈ ಕುರ್ತಾಕ್ಕೆ ತಕ್ಕುದಾದ ಪ್ಯಾಂಟ್ ಆಯ್ಕೆ ಮಾಡಿ ಧರಿಸಿದರೆ ಮತ್ತಷ್ಟು ಫ್ಯಾಷನಬಲ್ ಆಗಿ ಮಿಂಚಬಹುದು. ಪ್ಯಾಂಟ್‌ನಿಂದ ಕುರ್ತಾದ ಅಂದ ಮತ್ತಷ್ಟೂ ಹೆಚ್ಚಿ ಸ್ಟೈಲಿಶ್ ಆಗಿಯೂ ಕಾಣಿಸಿಕೊಳ್ಳಬಹುದು. ಬ್ಲ್ಯಾಕ್ ಆ್ಯಂಡ್ ವೈಟ್ ಲೆಗಿಂಗ್ಸ್, ಪಟಿಯಾಲ ಪ್ಯಾಂಟ್ ಟ್ರೆಂಡ್ ಈಗ ಬದಲಾಗಿ ಅಲ್ಲಿಗೆ ಪೆನ್ಸಿಲ್ ಕಟ್ ಪ್ಯಾಂಟ್, ಟ್ರೌಸರ್ಸ್, ಟುಲಿಪ್, ಸಿಗರೇಟ್ ಪ್ಯಾಂಟ್‌ಗಳು ಬಂದಿವೆ. ಇದನ್ನು ಧರಿಸಿದವರಿಗೂ ಸ್ಟೈಲಿಷ್ ಲುಕ್ ಬರುತ್ತದೆ. ಇದನ್ನು ಆಫೀಸ್, ಪಾರ್ಟಿಗಳಿಗೂ ಕೂಡ ಹಾಕಿಕೊಂಡು ಹೋಗಬಹುದು. ಒಂದು ಕಂಫರ್ಟ್ ಆದ ಉಡುಪು ಇದಾದ್ದರಿಂದ ಧರಿಸುವವರಿಗೂ ಖುಷಿಯಾಗುತ್ತದೆ. ಉಡುಪಿಗೆ ತಕ್ಕ ಆ್ಯಸಸರಿಸ್ ಅನ್ನು ಆಯ್ಕೆ ಮಾಡಿಕೊಂಡರೆ ನೀವು ಸ್ಟೈಲಿಷ್ ಆಗಿ ಕಾಣಿಸಿಕೊಳ್ಳುವುದು ಗ್ಯಾರಂಟಿ!

### ಪ್ರಿಂಟೆಂಡ್ ಕುರ್ತಾಕ್ಕೆ ಪೆನ್ಸಿಲ್‌ಕಟ್ ಪ್ಯಾಂಟ್

ಈಗಿನ ಹುಡುಗಿಯರು ಹೆಚ್ಚಾಗಿ ಟ್ರೆಂಡ್ ಫಾಲೊ ಮಾಡುವುದರಿಂದ ಅವರಿಗೆ ಈ ಪೆನ್ಸಿಲ್ ಕಟ್ ಪ್ಯಾಂಟ್ ಖಂಡಿತಾ ಇಷ್ಟವಾಗಬಹುದು. ಫ್ಲೋರಲ್ ಫಾಯಿಲ್ ಪ್ರಿಂಟ್ ಕುರ್ತಾಗೆ ಪೆನ್ಸಿಲ್ ಪ್ಯಾಂಟ್ ಸರಿಯಾಗಿ ಹೊಂದಿಕೆಯಾಗುತ್ತದೆ. ಧರಿಸಿದವರಿಗೂ ಸ್ಟೈಲಿಷ್ ಲುಕ್ ನೀಡುತ್ತದೆ. ವರ್ಕ್ ಇರುವ ಕುರ್ತಾ ಮತ್ತಷ್ಟು ಅಂದವಾಗಿರುತ್ತದೆ. ಇದನ್ನು ಹಬ್ಬಗಳಿಗೆ ಧರಿಸಬಹುದು. ಇದರ ಜತೆಗೆ ಸಿಲ್ವರ್ ಆ್ಯಕ್ಸೆಸರಿಸ್, ಬಿಗ್ ಡಯಲ್ ವಾಚ್, ವೆಡ್ಜಸ್ ಚೆನ್ನಾಗಿ ಹೊಂದಿಕೆಯಾಗುತ್ತದೆ. ಇವು ನಿಮ್ಮ ಸೌಂದರ್ಯವನ್ನು ಇಮ್ಮಡಿಸುತ್ತದೆ.

### ಸ್ಟ್ರಿಪ್ಡ್ ಶಾರ್ಟ್ ಕುರ್ತಾ, ಸ್ಟ್ರೈಟ್ ಪ್ಯಾಂಟ್

ಫಾರ್ಮಲ್ ಲುಕ್ ಇಷ್ಟಪಡುವವರಿಗೆ ಈ ಸ್ಟ್ರಿಪ್ಡ್ ಶಾರ್ಟ್ ಕುರ್ತಾ ಹಾಗೂ ಸ್ಟ್ರೈಟ್ ಪ್ಯಾಂಟ್ ಹೆಚ್ಚು ಹೊಂದಿಕೆಯಾಗುತ್ತದೆ. ಕಚೇರಿಗೆ ತೆರಳುವವರಿಗೆ ಇದು ಹೆಚ್ಚು ಸರಿಹೊಂದುತ್ತದೆ. ಇದರಲ್ಲಿ ಕುರ್ತಾದ ಪ್ಯಾಂಟ್ ಉದ್ದ ಕಡಿಮೆ ಇರುತ್ತದೆ. ಲೂಫರ್ಸ್ ಅಥವಾ ಹೀಲ್ಸ್ ಇದಕ್ಕೆ ಚೆನ್ನಾಗಿ ಒಪ್ಪುತ್ತದೆ. ಇತರ ಆಕ್ಸೆಸರೀಸ್ ಈ ಡ್ರೆಸ್‌ಗೆ ಅಗತ್ಯವೂ ಇಲ್ಲ.

